ರೀತಿ ಎಷ್ಟು ಚಂದ ಮಾರಾಯ್ರೆ. ನಾನು ಪ್ರೈಮರಿ ಶಾಲೆಯಲ್ಲಿರುವಾಗ ಶಶಿಪ್ರಭಾ ಟೀಚರ್ ಅಂತ ಇದ್ರು. ಅವ್ರ ಪಾಠ ಅಂದ್ರೆ ನಂಗೆ ತುಂಬ ಇಷ್ಟ. ಹಿಂದಿ, ಕನ್ನಡ ಪಾಠ ಅವ್ರದ್ದೇ. ಪ್ರತಿವರ್ಷ ಶಾಲೆಗೆ ಒಂದು ದಿನ ಇನ್ಸ್‌ಪೆಕ್ಟರ್ ಬಂದು ಪ್ರತಿ ಕ್ಲಾಸಿನಲ್ಲಿ ಮಕ್ಕಳ ಪ್ರಗತಿ ಪರಿಶೀಲನೆ ಮಾಡ್ತಾ ಇದ್ರು. ಅವರು ಬರುವ ಹಿಂದಿನ ದಿವಸ ನಮ್ಗೆ ಗೊತ್ತಾಗ್ತ ಇದ್ದದ್ದು. ಶಶಿಪ್ರಭಾ ಟೀಚರ್ ಒಂದಿನ, 'ನೋಡಿ ಮಕ್ಕಳೇ, ನಾಳೆ ಇನ್ಸ್‌ಪೆಕ್ಟರ್ ಬರ್ತಾರೆ ಆಯಿತಾ, ಎಲ್ಲರೂ ಚಂದ ಮಾಡಿ ಓದಿಕೊಂಡು ಬರ್ಬೇಕು. ಅವರು ಕೇಳುವ ಪ್ರಶ್ನೆಗೆ ಸರಿಯಾಗಿ ಉತ್ತರ ಕೊಡ್ಬೇಕು, ಬೆರ್ಚಪ್ಪನ (ಬೆದರುಬೊಂಬೆ) ಹಾಗೆ ನಿಲ್ಲುವುದಲ್ಲ ತಿಳೀತಾ' ಅಂತ ಹೇಳಿದ್ರು. ಈ ಟೀಚರು ಯಾವಾಗಲೂ ಕೊಂಡಾಟ (ಮುದ್ದಿನಿಂದ) ದಲ್ಲಿ ಮಾತಾಡುವವರು ಇವತ್ತು ಯಾಕೆ ಹೀಗೆ ಅಂತ ಆಶ್ಚರ್ಯದಿಂದ ಹಿಂದಿನ ಬೆಂಚಿನ ಹುಡುಗ ಜಗದೀಶ್ಚಂದ್ರ ಹತ್ತಿರ ಕೂತ ಹುಡುಗನತ್ರ ಕೇಳಿದ, 'ಎಂಚಿನಗೆ ಟೀಚರ್ ಪಂಡಿನವು?' (ಏನಂತೆ ಟೀಚರ್ ಹೇಳಿದ್ದು) ಅಂತ. ನಾಳೆ ಇನ್ಸ್‌ಪೆಕ್ಟರ್ ಬರ್ತಾರಂತೆ, ಸರಿಯಾಗಿ ಓದಿಕೊಂಡು ಬರ್ಬೇಕಂತೆ ಅಂತ ಹೇಳಿದ್ರು ಅಂದ.

ವೇಣೂರಿನ ವಿದ್ಯೋದಯ ಶಾಲೆಯಲ್ಲಿ ಓದಿದ ನಮ್ಗೆ ಹೆಡ್‌ಮಿಸ್ ಶೀಲಾ ಹೆಗ್ಡೆ, ಸಂಜೀವ ಮಾಷ್ಟ್ರು, ಶಿವರಾಮ ಮಾಷ್ಟ್ರು, ಅಶೋಕ ಮಾಷ್ಟ್ರು, ಹೇಮಾವತಿ ಟೀಚರ್, ವಿಜಯ ಟೀಚರ್ ಎಲ್ಲರ ಪಾಠ, ಅವರೊಂದಿಗೆ ಒಡನಾಟ ಎಷ್ಟು ಖುಷಿ ಆಗ್ತಿತ್ತು ಅಲ್ವಾ?



ಶಾಲೆಯಲ್ಲಿ, ಮನೆಯಲ್ಲಿ ಸಂತೆಯಲ್ಲಿ ಆಸ್ಪತ್ರೆಯಲ್ಲಿ ತುಳು ಮಾತೇ ಹೆಚ್ಚು ಪ್ರಚಲಿತ. ಸಂತೆ ಅಂತ ಹೇಳ್ದಾಗ ಇನ್ನೊಂದು ವಿಷಯ ನೆಂಪಾಗ್ತಾ ಉಂಟು ಮಾರಾಯ್ರೆ. ನಮ್ಮೂರಿನ ಸಂತೆ ಪ್ರತಿ ಮಂಗಳವಾರ ನಡೀತದೆ. ಸಂತೆಯಲ್ಲಿ ಸಿಗದ ವಸ್ತುಗಳೇ ಇಲ್ಲ. ತರಕಾರಿ, ಹಣ್ಣು, ಬಗೆ ಬಗೆ ತಿಂಡಿ, ಪಾತ್ರೆ ಸಾಮಾನು, ಎಲೆಯಡಿಕೆ, ಚರ್ಮುರಿ ಇಷ್ಟೆಲ್ಲ ವಸ್ತುಗಳಲ್ಲದೆ ಹುಳುಕು ಹಲ್ಲು, ಅಲ್ಲಾಡುವ ಹಲ್ಲು ತೆಗಿಯುವ ಡಾಕ್ಟರೂ ಅಲ್ಲಿ ಸಣ್ಣ ಟೆಂಟು ಹಾಕ್ತಾರೆ. ಮಾರ್ಗದ ಬದಿಯಲ್ಲೇ ಮುದುಕಂದಿರು, ಮುದುಕಿಯರು ಹಲ್ಲು ತೆಗಿಸಿಕೊಳ್ಳುವ ದೃಶ್ಯವೂ ಅಲ್ಲಿ ಕಾಣಸಿಗ್ತಿತ್ತು. ಸಂತೆಕಟ್ಟೆಯ ಒಂದು ಬದಿಯಲ್ಲಿ ಮೀನು ಮಾರುವ ಹೆಂಗಸರಿದ್ದರು. ಒಂಜಿ ಕಿಲೊ ಐವ, ಪಜ್ಜಿ ಮೀನ್, ನುಂಗೆಲ್ ಮೀನ್ ಬಲೆ ಬಲೆ (ಒಂದು ಕಿಲೋಗೆ ಐವತ್ತು ರೂಪಾಯಿ, ಹಸಿ ಮೀನು, ಒಣಗಿದ ಮೀನು ಬನ್ನಿ ಬನ್ನಿ) ಅಂತಿದ್ರು. ಆ ಘಾಟು ವಾಸನೆ ಮೂಗಿಗೆ ಬೀಳುತ್ತಲೇ ನಾವು ಅಲ್ಲಿಂದ ಪದ್ರಾಡ್ (ಕಾಲು ಕೀಳುವುದು) ಆಗ್ತಿದ್ದೆವು.

## ಬೊಂಡದ ರುಚಿ

ಕೆಲಸದ ನಿಮಿತ್ತ ಒಮ್ಮೆ ಮಂಗ್ಳೂರಿಗೆ ಹೋಗ್ಬೇಕು ಅಂತ ಪುತ್ತೂರು ಬಸ್‌ಸ್ಟ್ಯಾಂಡಿನಲ್ಲಿ ನಿಂತಿದ್ದೆ. 'ಕುಡ್ಲ ಕುಡ್ಲ...' (ತುಳುವಿನಲ್ಲಿ ಕುಡ್ಲ ಎಂದರೆ ಮಂಗಳೂರು ಅಂತ ಅರ್ಥ) ಅಂತ ಬಸ್ ಏಜೆಂಟರು ಬೊಬ್ಬೆ ಹೊಡಿತಾ ಇದ್ರು. ಹೋಗಿ ಬಸ್ ಹತ್ತಿದಾಗ ಪಕ್ಕದಲ್ಲಿ ಕುಳಿತ ಒಬ್ಬ ಹೆಂಗಸು ಮಾತಿಗೆಳೆದರು. 'ನೀವು ದೂರ?' ಎಂದರು. ದೂರ ಎಂದರೆ ಎಲ್ಲಿಗೆ ಅಂತ ಅರ್ಥ. ಮಂಗಳೂರಿಗೆ ಅಂದೆ. ನೀವೂ ಅಂದೆ. ಅದಕ್ಕೆ ನಾನು ಸಾ (ಕೂಡ) ಮಂಗಳೂರಿಗೆ ಹೋಗ್ಬೇಕು, ತುಂಬ ಹೊತ್ತಿನಿಂದ ಬಸ್ ಇರ್ಲಿಲ್ಲ. ನಾನು ಬೇಗ ಕೆಲಸ ಮುಗಿಸಿ ಮನೆಗೆ ಎತ್ತಬೇಕು (ತಲುಪಬೇಕು), ತಡ ಮಾಡಿದರೆ ಮಗು ಕೂಗುತ್ತದೆ (ಅಳುತ್ತದೆ) ಎಂದರು.

ಮಟಮಟ ಮಧ್ಯಾಹ್ನ. ಮಂಗಳೂರಿನ ಕಂಕನಾಡಿಯಲ್ಲಿ ಬಸ್ ಇಳಿದೆ. ಜೋರು ಬಾಯಾರಿಕೆ ಆಗುತ್ತಿತ್ತು. ಬಸ್ ಸ್ಟ್ಯಾಂಡ್‌ನಲ್ಲಿ ನಿಂತಿದ್ದ ಒಬ್ಬನತ್ರ 'ಇಲ್ಲಿ ಬೊಂಡ (ಎಳನೀರು) ಮಾರುವವರು ಎಲ್ಲಾದರೂ ಇದ್ದಾರ ಮಾರಾಯ್ರೆ' ಅಂತ ಕೇಳ್ದೆ. ಅವ್ನು ನನ್ನ ಕಡೆ ನೋಡಿ, 'ಇದೇ ಮಾರ್ಗದಲ್ಲಿ ಮುಂದೆ ಹೋಗಿ, ಫಸ್ಟ್ ತಿರ್ಗಾಸಿನಲ್ಲೇ (ತಿರುವು) ಒಬ್ಬ ಬೊಂಡ ಮಾರ್ತಾನೆ. ರಪಕ್ಕ (ಬೇಗ) ಹೋಗಿ, ಒಂದು ಗಂಟೆಗೆ ಅವನು ಬೊಂಡದ ಮೇಲೆ ಟಾರ್ಪಾಲ್ ಮುಚ್ಚಿ ಊಟಕ್ಕೆ ಹೋಗ್ತಾನೆ' ಅಂದ. ಹೀಗೆ ಹೇಳಿದ ಕೂಡಲೇ ಬೇಗ ಬೇಗ ಹೋದೆ. ಬೊಂಡದವ ಇದ್ದ, ಬಚಾವ್ ಅಂತ ಅಂದ್ಕೊಂಡು 'ಒಂದು ಬೊಂಡ ಎಷ್ಟು ಕ್ರಯ?' ಎಂದೆ. ಅರುವತ್ತು ರೂಪಾಯಿ ಅಂದ. ಅಯ್ಯೋ ಬೆಂಗಳೂರಿನಲ್ಲೇ ಐವತ್ತಕ್ಕೆ ಸಿಗ್ತದೆ. ಇಲ್ಲಿ ಇಷ್ಟೊಂದು ರೇಟು ಉಂಟಾ? ಎಂದೆ. ಆಗ ಅವನು ಏನು ಮಾಡುವುದು ಮಾರಾಯ್ರೆ, ಬೊಂಡಗಳೇ ಬರುತ್ತಿಲ್ಲ ಈಗ, ಈ ಕ್ರಯಕ್ಕೆ ಸಿಕ್ಕುದು ನಿಮ್ಮ ಪುಣ್ಯ' ಅಂದ. ಇನ್ನೇನು ಮಾಡುವುದು, ಬಾಯಾರಿಕೆ ಹೋಗಬೇಕಲ್ಲ ಅಂತ ಒಂದು ಬೊಂಡ ಒಟ್ಟೆ (ತೂತು) ಮಾಡಿಕೊಡಿ ಎಂದೆ. ಆಮೇಲೆ ಬೊಂಡ ಕುಡಿದು, ಬಾವೆ (ಗಂಜಿ) ತಿಂದು ಹೊಟ್ಟೆ ತಂಪು ಮಾಡಿ ನನ್ನ ದಾರಿ ಹಿಡಿದೆ.

## ಡೆನ್ನ ಡೆನ್ನನ ಡೆನ್ನ ಡೆನ್ನಾನ...

ದಕ್ಷಿಣ ಕನ್ನಡದಲ್ಲಿ ಪಾಡ್ದನ ಕೇಳೋದು ಅಂದ್ರೆ ಬಾರೀ ಖುಷಿ ವಿಷಯ ಮಾರಾಯ್ರೆ. ಹೆಂಗಸ್ರು ಏರು ದನಿಯಲ್ಲಿ ಪಾಡ್ದನ ಹಾಡೋದನ್ನು ಕೇಳೋದೇ ಚಂದ, ಇದು ದಕ್ಷಿಣ ಕನ್ನಡದ ತುಳುನಾಡಿನ ಸಿರಿ. ಜಾನಪದ ಸೊಗಡಿನ ಈ ನೆಲದಲ್ಲಿ ಪಾಡ್ದನವನ್ನು ಬಾಯಿಯಿಂದ ಬಾಯಿಗೆ ಹರಡಿಯೇ ಜನಪ್ರಿಯಗೊಳಿಸಿದ ವಿಶಿಷ್ಟ ಕಲೆ. ಇದನ್ನು ಭೂತಾರಾಧನೆ ಸಂದರ್ಭಗಳಲ್ಲಿ ಭೂತಗಳ ಹುಟ್ಟು, ಸಾಹಸ ಮತ್ತು ಸಂಚಾರಗಳ ಬಗ್ಗೆ ಹಾಡ್ತಾರೆ.

'ಸುಳ್ಯದ ಎಂಕಜ್ಜಿ ಹಾಡುವ ಪಾಡ್ದನ ತುಂಬ ಒಳ್ಳೆಯದಿರುತ್ತದೆ, ಒಮ್ಮೆ ಕೇಳಲಿಕ್ಕೆ ಬಾ ಮಾರಾಯ್ತಿ' ಅಂತ ಗೆಳತಿಯರಾದ ನಳಿನಿ, ಕುಮುದಾ ಕರೆದಿದ್ರು. ನಾವು ಹೋದೆವು. ಅಜ್ಜಿ ಖುಷಿ ಮೂಡಲ್ಲಿದ್ರು. ನಾವು ಹಾಡು ಕೇಳಲು ಬಂದಿದ್ದೇವೆ ಎಂದಾಗ, ಡೆನ್ನ ಡೆನ್ನನ ಡೆನ್ನ ಡೆನ್ನಾನ... ಎಂದು ಬಾಯಿ ಅಗಲಿಸಿ ಹಾಡಿದ್ರು. ಇದೇ ಊರಿನಲ್ಲಿದ್ದ ನೆಂಟರ ಮನೆಗೆ ಹೋಗಿ ರಾತ್ರಿ ಉಳ್ಕೊಂಡೆವು. ಕುಚ್ಚಿಲಕ್ಕಿ ಅನ್ನ, ಕುಂಬಳಕಾಯಿ ಮೇಲೋಗರ, ಸೌತೆಕಾಯಿ ಪುಳಿಕೊದ್ದೆಲ್ (ಸಾಂಬಾರ್) ಊಟ ಮಾಡಿ ಗಡದ್ದಾಗಿ ನಿದ್ದೆಯನ್ನೂ ಮಾಡಿ ಮರುದಿನ ಬೆಳಿಗ್ಗೆ ರುಚಿ ರುಚಿಯಾದ ಪುಂಡಿ– ಗಸಿ ತಿಂಡಿ ತಿಂದು ಹೊರಟೆವು. ಎಂಕಜ್ಜಿಯ ಪಾಡ್ದನ ಕಿವಿಯಲ್ಲೇ ರಿಂಗಣಿಸುತ್ತಿತ್ತು.

ಒಟ್ಟಿನಲ್ಲಿ ನಮ್ಮೂರು ಚಂದವೋ ನಿಮ್ಮೂರು ಚಂದವೋ ಅಂತ ಕೇಳಿದರೆ ನಾನು ಮಂಗಳೂರೇ ಚಂದ ಅಂತ ಹೇಳ್ತೇನೆ. ಇಲ್ಲಿನ ಕಡಲು, ಮಲ್ಲಿಗೆಯ ಘಮಲು, ಮಳೆಗಾಲದ ಸೊಬಗು, ಯಕ್ಷಗಾನದ ವೈಭವ, ಕಂಬಳದ ಮೇಳ, ದೇವಸ್ಥಾನ, ಭೂತ–ದೈವದ ಆರಾಧನೆ, ರುಚಿ ರುಚಿ ಬದನೆ–ಬಸಳೆ, ಕೊಟ್ಟೆಕಡುಬು, ಪುಂಡಿ ಗಸಿ, ಪತ್ರೊಡೆಯ ಸ್ವಾದ, ಗೆಣಸಲೆಯ ಘಮ, ಜಾತ್ರೆಯ ಮಜಾ ಎಲ್ಲವನ್ನೂ ನೋಡಿದರೆ ಆಹಾ... ನಮ್ಮ ಜಿಲ್ಲೆ ಎಷ್ಟು ಚಂದ ಉಂಟು ಅಲ್ವಾ? ಎನಿಸದೇ ಇರದು.

ಕರ್ನಾಟಕದ ವಿವಿಧ ಜಿಲ್ಲೆಗಳ ನುಡಿಸೊಬಗನ್ನು ಪರಿಚಯಿಸುತ್ತಿರುವ 'ಚೆನ್ನುಡಿ' ಅಂಕಣಕ್ಕೆ ನೀವೂ ಬರೆಯಬಹುದು. ನಿಮ್ಮೂರಿನ ಭಾಷೆಯ ಸೊಗಡನ್ನು ಓದುಗರೊಂದಿಗೆ ಹಂಚಿಕೊಳ್ಳಬಹುದು.
ಲೇಖನ 1000 ಪದಮಿತಿಯಲ್ಲಿ, ನುಡಿ ಅಥವಾ ಯುನಿಕೋಡ್‌ನಲ್ಲಿರಲಿ.
ಇಮೇಲ್– **editorsu@sudha.co.in**